

## ಸುನಂದಾ ಪ್ರಕಾಶ ಕಡಮೆ

ಪಶ್ಚಿಮ ಕರಾವಳಿಯ ಅನುಪಮಾ, ಪಿ.ಯು ಮೊದಲ ವರ್ಷದ ಕಾಲೇಜಿಗೆಂದು ಹುಬ್ಬಳ್ಳಿಯ ತನ್ನ ಅಣ್ಣನ ಮನೆಯಲ್ಲುಳಿಯಲು ಬಂದ ಹೊಸದು. ಪಟ್ಟಣದ ತುಂಬ ಆವರಿಸಿಕೊಂಡ ವಿಚಿತ್ರ ಕೆಂಪು ಮುಸುಕಿದ ಮಂಜು, ರಸ್ತೆಯಲ್ಲಿ ಆಗಾಗ ಕೇವಲ ಅನುಭವಕ್ಕೆ ಮಾತ್ರ ನಿಲುಕುವ ಗುಲಾಬಿ ರಂಗಿನ ಕಾರಂಜಿ, ಸಂಜೆ ಮನೆಗೆ ಹಿಂದಿರುಗಿ ತೆಗೆದಿಟ್ಟ ಉಡುಪುಗಳಲ್ಲೆಲ್ಲ ಕೆಂಪು ಚುಕ್ಕೆಯ ಕಲೆಗಳು. ಅನುಪಮಾ ಸೋಜಿಗದಲ್ಲೇ ಮೀಯತೊಡಗಿದ್ದಳು.

ಒಂದಿನ ಅಣ್ಣನ ಬಳಿ ಈ ಸಂಗತಿ ಕೇಳಿಯೇಬಿಟ್ಟಳು. ಅವನು ಅತ್ತಿಗೆಯೊಡನೆ ಸಹಜವಾಗಿ, 'ನೋಡೇ, ಇವಳಿಗೆ ಊರಿನ ಮಳೆಗೂ ಹುಬ್ಬಳ್ಳಿಯ ತುಂತುರಿಗೂ ವ್ಯತ್ಯಾಸ ಎಷ್ಟು ಬೇಗ ಗೊತ್ತಾಗ್ತಿದೆ?' ಅನ್ನುತ್ತ ನಕ್ಕುಬಿಟ್ಟಿದ್ದ. ಅಣ್ಣನ ಆ ತಮಾಷೆ ಅನುಪಮಳಿಗೆ ಅರ್ಥವಾಗದೇ ಇನ್ನಷ್ಟು ದಿಗಿಲು ತರಿಸಿತ್ತು.

ಅಂದು ಶೌಚಾಲಯದ ನಳ ತಿರುಗಿಸಿದರೆ, ಅರೆ! ಕೆಂಪು ರಾಡಿ ನೀರು! ಕುಡಿವ ನೀರಿನ ಟಾಕಿಯಲ್ಲಿ ಲೋಟ ಅದ್ದಿದರೂ ಅಲ್ಲೂ ಅದೇ ರಂಗು! ಎಷ್ಟೋ ದಿನ ಅನುಪಮಾಗೆ ನೀರು ಕುಡಿಯಲೂ ಹೊಟ್ಟೆ ತೊಳೆಸಿದಂತಾಗುತ್ತಿತ್ತು. ಅತ್ತಿಗೆ ತಾನೇ ಲೋಟ ಟಾಕಿಯಲ್ಲಿ ಅದ್ದಿ ತೆಗೆದು 'ಸ್ವಚ್ಛ ನೀರೇ ಉಂಟು ನೋಡು' ಅಂತ ತೋರಿದ್ದಳು. ಆದರೆ ಅದೇ ಲೋಟ ಅನುಪಮಾ ಕೈಗೆ ಬಂದ ತಕ್ಷಣವೇ ಅದು ಬಣ್ಣದ ನೀರಾಗಿ ಪರಿವರ್ತನೆಯಾಯಿತು, ಆ ದಿನ ಪುಸ್ತಕದ ಪುಟ ತೆರೆದಾಗಲೂ ಅಲ್ಲಿ ಕೂಡ ಕೆಂಪಿನ ಚಿತ್ತಾರ ಕಂಡು ಅವಳು ಆತಂಕಗೊಂಡಳು. ಒಗೆದು ಹೊರ ಬಳ್ಳಿಗೆ ಒಣ ಹಾಕಿದ ಬಟ್ಟೆಗಳ ಮೇಲೂ ಅಂಥದೇ ಬಣ್ಣದ ಪ್ರೋಕ್ಷಣೆ. ಅನುಪಮಾಗೆ ವಿಭ್ರಮೆಯಾಗತೊಡಗಿತ್ತು, ಅಂದೇ ಅಣ್ಣನೊಡನೆ ಅವಳು, 'ಕಾಲೇಜು ಬೇಡ, ಊರಿಗೆ ಹೋಗ್ತೆ' ಅಂತ ಹಟ ಹಿಡಿದದ್ದು.

ಅನುಪಮಳ ಕಷ್ಟ ನೋಡಲಾರದೇ ಅಣ್ಣ, 'ಇನ್ನು ಮೇಲೆ ರಸ್ತೇಲಿ ನಡೆವಾಗ, ಎದುರುಗೊಳ್ಳುವವರ ಅಥವಾ ಅಕ್ಕ ಪಕ್ಕ ಹಾಯುವವರ ಬಾಯನ್ನು ತಪ್ಪದೇ ಗಮನಿಸು. ನಿನ್ನ ಈ ಭ್ರಮೆಗೆ ಮೂಲ ಕಾರಣ ಅಲ್ಲಿರುತ್ತದೆ. ಅವರ ದವಡೆ ವಿನಾಕಾರಣ ಅಲುಗಾಡುತ್ತಿದೆ ಅಂತ ಅನ್ನಿಸಿದ ತಕ್ಷಣ ಅಂಥವರಿಂದ ನೀನು ಒಂದು ಅಂತರ ಕಾಪಾಡಿಕೋ, ನಿನ್ನ ಸಮಸ್ಯೆಗೆ ಇದೇ ಪರಿಹಾರ' ಎಂಬ ಸಲಹೆ ನೀಡಿ ಸಮಾಧಾನ ಪಡಿಸಿದ.

ಮಾರನೇ ದಿನ ಕಾಲೇಜಿಗೆ ಹೊರಟವಳು ಚಪ್ಪಲಿ ಮೆಟ್ಟಿ ಮನೆ ಬಾಗಿಲಿಂದ